ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಇದೊಂದು ವಿಷಯದಲ್ಲಿ ಮಾತ್ರ ಸರ್ಕಾರ ಎರಡು ರೀತಿಯಲ್ಲಿ ಉತ್ತರವನ್ನು ಕೊಡಬೇಕಾಗುತ್ತದೆ. ಅಂಗಪಕ್ಷಗಳು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಡುತ್ತಿದ್ದಾರೆ. ನಾವು ಪತ್ರಿಕೆಯನ್ನು ಓದಿ ತಿಳಿದುಕೊಂಡಿದ್ದೇವೆ.

ಅಧ್ಯಕ್ಷರು : ಅವರು ಯಾವ ರೀತಿಯಾಗಿ ಉತ್ತರವನ್ನು ಕೊಡುತ್ತಾರೆಂದು ನೋಡೋಣ. 69ರ ಕೆಳಗಡೆ ನಾಳೆಯ ದಿವಸ ತೆಗೆದುಕೊಳ್ಳೋಣ.

ಶ್ರೀ ಎಂ.ಪಿ.ಪ್ರಕಾಶ್ : ಅವರಿಗೆ ಅಗತ್ಯವಿದ್ದರೆ..

ಅಧ್ಯಕ್ಷರು : ಸುಮ್ಮನೆ ಕಾಲಹರಣ ಮಾಡುವುದು ಬೇಡ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಕುಮಾರ ಬಂಗಾರಪ್ಪನವರೇ, ನಿಮ್ಮದು ಹೇಳಿ.

(ಗೊಂದಲ)

9. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

ವಿಷಯ: ರಾಜ್ಯ ರಸ್ತೆ ಸಾರಿಗೆ ಬಸ್ ದರ ಏರಿಕೆಯ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ರೀತಿಯಾದಂತಹ ಸಾರಿಗೆಯ ಬಸ್ ದರ ಏರಿಕೆ ಮಾಡಿರುವುದು ಮನಸೋ ಇಚ್ಛೆ ಅದು ವೈಜ್ಞಾನಿಕವಾಗಿಲ್ಲ. ಪ್ರಾಮಾಣಿಕವಾಗಿಲ್ಲ. ಕೇಂದ್ರ ಸರ್ಕಾರದವರು ಡಿಸೇಲ್ ಹಾಗೂ ಪೆಟ್ರೋಲ್ ದರವನ್ನು ಏರಿಸಿದ ತಕ್ಷಣ ಇಲ್ಲಿ ಬಸ್ ದರ ಏರಿಕೆಯಾಗುವುದು ರೆಡಿ. ನಿಮಗೆ ಏತಕ್ಕೆ ಭಯ, 12 ಗಂಟೆ ರಾತ್ರಿಯಿಂದ ಹಿಂದೆ 12 ಗಂಟೆ ರಾತ್ರಿ ಎಂದರೆ ಸ್ವಾತಂತ್ರ್ಯದ ನೆನಪು ಬರುತ್ತದೆ. ಇದೇನೂ ಸ್ವಾತಂತ್ರ್ಯವೇ, ನೀವು ಬಸ್ ದರ ಏರಿಕೆ ಮಾಡಿರುವುದು. ಈಗ ಸರ್ಕಾರಿ ಬಸ್ ದರ ಏರಿಕೆ ಮಾಡಿದಿರಿ, ಖಾಸಗಿಯವರು ಬಸ್‌ದರವನ್ನು ಏರಿಸಿದರು. ಇದೇ ರೀತಿಯಾಗಿ ಬಡವರ ಮೇಲೆ ಜನಸಾಮಾನ್ಯರ ಮೇಲೆ ಎಲ್ಲರ ಮೇಲೆ ಅನೇಕ ಸೋರಿಹೋಗುವಂತಹ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬೇಕು. ಸೋರಿಹೋಗುವುದರ ಬಗ್ಗೆ ತಡೆಗಟ್ಟಬೇಕು. ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕು. ನೀವು ದರ ಏರಿಕೆಯನ್ನು ನಿಲ್ಲಿಸಬಹುದು. ತಮಿಳುನಾಡಿನಲ್ಲಿ ದರ ಏರಿಕೆ ಇಲ್ಲ, ತಮಿಳುನಾಡು ಕೂಡ ನಮ್ಮ ದೇಶದಲ್ಲಿದೆ, ಅದು ಪಕ್ಕದ ರಾಜ್ಯವಾಗಿದೆ. ಅಲ್ಲಿ ಬಸ್ ದರ ಏರಿಕೆ ಇಲ್ಲ. ಆದರೆ ಇಲ್ಲಿ ನೀವು ಬಸ್ ದರ ಏರಿಸತಕ್ಕಂಥದ್ದು, ತಾವು ಕೊನೆಯವರೆವಿಗೂ ಬಸ್ ದರವನ್ನು ಏರಿಕೆ

ಮಾಡುವುದಿಲ್ಲವೆಂದು ಹೇಳುತ್ತಿದ್ದು, ನೀವು ರಾತ್ರೋರಾತ್ರಿ ಬಸ್ ದರವನ್ನು ಏರಿಸಿ ಜನರ ತಲೆಯ ಮೇಲೆ ಕಲ್ಲುಚಪ್ಪಡಿಯನ್ನು ಎಳೆಯುತ್ತಿದ್ದೀರಿ. ಮಧ್ಯಮವರ್ಗದ ಜನರ ಮೇಲೆ, ರೈತರ ಮೇಲೆ, ವಿದ್ಯಾರ್ಥಿಗಳ ಮೇಲೆ ಜನಸಾಮಾನ್ಯರ ಮೇಲೆ ನೀವು ಬಸ್‌ದರ ಏನು ಏರಿಸಿದ್ದೀರಿ, ನೀವು ತಕ್ಷಣ ಬಸ್‌ದರವನ್ನು ಕನಿಷ್ಟವಾದರೂ ಕೆಳಗೆ ಇಳಿಸಬೇಕೆಂದು ನಾವು ಒತ್ತಾಯವನ್ನು ಮಾಡುತ್ತೇನೆ. ತಾವು ಬಸ್‌ದರವನ್ನು ಇಳಿಸುವುದಿಲ್ಲವೆಂದರೆ, ವಿಶೇಷವಾದಂತಹ ವಿನೂತನವಾದಂತಹ ಧರಣವನ್ನು ನಾವು ನಿಮ್ಮ ಮುಂದೆ ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಕೆಎಸ್‌ಆರ್‌ಟಿಸಿಯು ಈಗ ಸರ್ವೀಸ್ ಸೆಂಟರ್ ಆಗಿ ಉಳಿದಿಲ್ಲ. ಅವರು ಬರೀ ಲಾಭ ಮಾಡುವಂತಹ ದೃಷ್ಟಿಯನ್ನು ಇಟ್ಟುಕೊಂಡು ತಾವು ಬಸ್‌ಗಳನ್ನು ಓಡಿಸುತ್ತಿದ್ದೀರಿ; ಎಂದು ನಾವು ಮೊದಲಿನಿಂದಲೂ ನಾವು ಮಾತನಾಡಿ ಕೊಳ್ಳುತ್ತಿದ್ದೇವೆ. ವಿಶೇಷವಾಗಿ ಡೀಸೆಲ್ ಮತ್ತು ಪೆಟ್ರೋಲ್ ರೇಟ್ ಜಾಸ್ತಿಯಾಗಿರುವ ದಿವಸ, ಕಪ್ಪುಬಟ್ಟೆಯನ್ನು ಹಾಕಿಕೊಂಡಿರುವುದು ನಿಜ. ಸನ್ಮಾನ್ಯ ಮಂತ್ರಿಗಳು ನಾನು ದರ ಏರಿಕೆಯನ್ನು ಮಾಡುವುದಿಲ್ಲ, ಈ ಸರ್ಕಾರದಲ್ಲಿರುವ ಸನ್ಮಾನ್ಯ ಚಲುವರಾಯಸ್ವಾಮಿ ಯಾವರಾದರೂ ತಾವು ಹೇಳಿದಂತೆ ನಡೆದುಕೊಳ್ಳಬಹುದು ಎನ್ನುವಂತಹ ನಿರೀಕ್ಷೆಯನ್ನು ಇಟ್ಟು ಕೊಂಡಿದ್ದೆವು. ಅವರೇ ಹೇಳಿರುವಂತಹ ಪೇಪರ್ ಕಟಿಂಗ್ಸ್‌ನ್ನು ನಾನು ಬೇಕಾದರೆ ತಂದು ತೋರಿಸುತ್ತೇನೆ. ಅವರು ಹೇಳಿರುವಂತಹ ಮಾತನ್ನು ನಾವು ನಂಬಿರುತ್ತೇವೆ. ಮಾನ್ಯ ಚಲುವರಾಯಸ್ವಾಮಿಯವರು ಈ ಸಲ ನಾವು ಬಸ್ ದರವನ್ನು ಏರಿಸುವುದಿಲ್ಲ ಎಂದು ಹೇಳಿ ಏಕಾಏಕಿಯಾಗಿ ಬಸ್ ಧಾರಣೆಯನ್ನು ಜಾಸ್ತಿ ಮಾಡಿದ್ದಾರೆ. ಇದರ ಪರಿಣಾಮ ಏನಾಗುತ್ತದೆ. ಇದೊಂದು ಸಾರಿ ಇವರು ಬಸ್ ದರವನ್ನು ಜಾಸ್ತಿ ಮಾಡಿದ ತಕ್ಷಣ ಆರ್‌ಟಿಒಗಳು, ತಾಲ್ಲೂಕಿನಲ್ಲಿರುವಂತಹ ಅಡ್ಮಿನಿಸ್ಟ್ರೇಷನ್ ಸಿವಿಲ್ ಬಸ್‌ನವರು ಬಸ್ ದರವನ್ನು ಜಾಸ್ತಿ ಮಾಡುವುದಕ್ಕೆ ಅವರುಗಳು ಸ್ಲ್ಯಾಬ್‌ನ್ನು ಇಟ್ಟುಕೊಂಡಿದ್ದಾರೆ. ಅವರೂ ಕೂಡ ಬಸ್‌ದರವನ್ನು ಜಾಸ್ತಿ ಮಾಡುತ್ತಾರೆ. ಗ್ರಾಮೀಣ ಪ್ರದೇಶದ ಜನರು ಬಸ್ಸಿನಲ್ಲಿ ಓಡಾಡುವಂತಹ ಜನರು ಇವತ್ತು ಬಸ್ ಹತ್ತಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಅದಕ್ಕಾಗಿ ಅವರನ್ನು ಕೇಳಿಕೊಂಡೆವು. ನಿಮ್ಮದು ಯಾವುದಾದರೂ ಟ್ಯಾಕ್ಸ್ ಇದ್ದರೆ ಕಡಿಮೆ ಮಾಡಿ, ನಿಮ್ಮ ಲಾಭಾಂಶ ಯಾವುದಾದರೂ ಇದ್ದರೆ forego ಮಾಡಿ ಇಂತಹ ಕ್ಲಿಷ್ಟ ಸಮಯದಲ್ಲಿ ಉಪಯೋಗಿಸಿಕೊಳ್ಳಿ. ಈಗ ಬಸ್ ಪ್ರೈಸ್‌ನ್ನು ಏರಿಸಿ

ಕೆಎಸ್ಆರ್‌ಟಿಸಿಯನ್ನು ಬಹಳ ಲಾಭದಲ್ಲಿಟ್ಟುಕೊಂಡಿದ್ದೇವೆಂದು, ಹೇಳಿ ಬಹಳ ಬಹಳ ಹಾಳಾಗಿರುವ ಬಸ್‌ಗಳನ್ನು ಇವತ್ತು ರಸ್ತೆಯ ಮೇಲೆ ತರುತ್ತಿದ್ದೀರಿ. ಸಾಮಾನ್ಯ ಜನರು ಓಡಾಡುವುದಕ್ಕೆ ಆ ಲಾಭಾಂಶದ ಸ್ವಲ್ಪ ಭಾಗವನ್ನು ಈಗ ತಾವು ಖರ್ಚು ಮಾಡಬೇಕು. ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಜಾಸ್ತಿಯಾದಾಗ ಈ ರೀತಿಯಾಗುತ್ತದೆ ಅದರ ಬಗ್ಗೆ ನಮಗೆ ಅರ್ಥವಾಗುತ್ತದೆ. ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಜಾಸ್ತಿಯಾದಾಗ ಕೆಎಸ್ಆರ್‌ಟಿಸಿಗೆ ನಷ್ಟವಾಗುತ್ತದೆ. ನೀವು ಇಷ್ಟು ವರ್ಷಗಳ ಕಾಲ ಅದರಿಂದ ದುಡ್ಡಿದ್ದೀರಲ್ಲಾ, ಇಷ್ಟು ವರ್ಷ ಮಾಡಿರುವಂತಹ ಲಾಭದಲ್ಲಿ ಸ್ವಲ್ಪ ಲಾಭಾಂಶವನ್ನಾದರೂ ಕೂಡ ನೀವು ಅದಕ್ಕಾಗಿ ವಿನಿಯೋಗ ಮಾಡಿ ಈಗಲಾದರೂ ಬಸ್ ದರವನ್ನು ಕಡಿಮೆ ಮಾಡಬೇಕು. ರಾಜ್ಯದ ಜನರು ಇವತ್ತು ಬಸ್‌ನಲ್ಲಿ ಓಡಾಡುವವರಿದ್ದಾರೆ, ಈ ರಾಜ್ಯದಲ್ಲಿ ಟ್ರೈನ್‌ಗಳು ಬಹಳ ಕಡಿಮೆ ಇದೆ. ನಾವು ಅಂತೂ ಕೂಡ ಟ್ರೈನ್ ಹತ್ತಿ ಕುಳಿತೇ ಇಲ್ಲ. ಬಹುಶಃ ಶಿವಮೊಗ್ಗ ರೋಡ್‌ನಿಂದ ಆ ಕಡೆ ಇರುವಂತಹ ಜನರಿಗೆ ಬಸ್‌ನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಇಷ್ಟೊಂದು ಬಸ್ ದರ ದುಬಾರಿಯಾಗಿರುವುದರಿಂದ ಸರಿಯಿಲ್ಲ. ತಾವು ಬಸ್‌ದರವನ್ನು ಇಳಿಸ ಬೇಕಾಗುತ್ತದೆ. ತಾವು ಇಳಿಸುವುದಿಲ್ಲವೆಂದರೆ ನಾವು ಮುಂದಿನ ಕಾರ್ಯಕ್ರಮವನ್ನು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಹಾಕಿಕೊಳ್ಳ ಬೇಕಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಚೆಲುವರಾಯಸ್ವಾಮಿಯವರು ಬಸ್‌ದರವನ್ನು ಏರಿಕೆ ಮಾಡುವುದಿಲ್ಲ ವೆಂದು ಕಡೇ ಗಳಿಗೆಯವರೆಗೂ ಹೇಳುತ್ತಿದ್ದರು. ನಾವು ಅವರ ಮೇಲೆ ಭಾರಿ ವಿಶ್ವಾಸವನ್ನು ಇಟ್ಟು ಕೊಂಡಿದ್ದೆವು. ಏಕೆಂದರೆ, ಹಳ್ಳಿಗಾಡು ಪ್ರದೇಶದಲ್ಲಿ ಬಂದಿರತಕ್ಕಂತಹ ಶಾಸಕರು ಮಂತ್ರಿಯಾಗಿದ್ದಾರೆ. ಅವರಿಗೆ ಹಳ್ಳಿಗಾಡಿನವರ ಕಷ್ಟ ಗೊತ್ತಾಗುತ್ತದೆ. ಅವರು ಹೇಳುತ್ತಾ ಇರುವುದು ಪ್ರಾಮಾಣಿಕವಾಗಿದೆ; ಎಂದು ನಾವು ಭಾರಿ ನಂಬಿಬಿಟ್ಟಿದ್ದೆವು. ಆದರೆ ಮಧ್ಯರಾತ್ರಿಯಲ್ಲಿ ಕಳ್ಳರು ಏರಿಸಿದ ಹಾಗೆ ಬಸ್‌ದರವನ್ನು ಏರಿಸಿದ್ದೀರಿ. ಇದು ಭಾರಿ ಸಮಸ್ಯೆಯಾಗಿದೆ. ಆದರೆ ಅವರು ಹೀಗೆ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆಂದರೆ ಪೆಟ್ರೋಲ್ ಡೀಸೆಲ್ ರೇಟ್ ಜಾಸ್ತಿಯಾಗಿದೆ, ಅದಕ್ಕೋಸ್ಕರ ಬಸ್ ದರವನ್ನು ಏರಿಸುವುದು ಅನಿವಾರ್ಯ ಎಂದು ಹೇಳುತ್ತಿದ್ದಾರೆ. ನಾನು ಈಗ ಅಂಕಿಅಂಶಗಳನ್ನು ತಂದಿರುವುದಿಲ್ಲ. ಬೇಕಾದರೆ ಅದನ್ನು ನಾನು ತಮಗೆ ತಂದುಕೊಡುತ್ತೇನೆ. ಇವತ್ತು ಪೆಟ್ರೋಲ್ ರೇಟ್ ಇಂಟರ್ ನ್ಯಾಷನಲ್ ಮಾರ್ಕೆಟ್‌ನಲ್ಲಿ ಒಂದು ಬ್ಯಾರೆಲ್‌ಗೆ 73 ಡಾಲರ್ಸ್

ಹೆಚ್ಚಿಗೆ ಆಗಿದೆ. ಅದರ ಪ್ರಕಾರ ಲೆಕ್ಕ ಹಾಕಿದರೂ ಕೂಡ ಇವರಿಗೆ ಇವತ್ತು ಕೂಡ ಒಂದು ಲೀಟರ್ ಡಿಸೇಲ್‌ಗೆ 19 ರೂಪಾಯಿ 20 ಪೈಸೆ ಮಾತ್ರ ಆಗುತ್ತದೆ. ಆ ರೇಟ್ ಪ್ರಕಾರ ಕೊಟ್ಟರೆ ಇಷ್ಟು ಆಗುತ್ತದೆ. ಅಂದರೆ ಇವರು ಏನು 38.60 ಪೈಸೆ ಡೀಸೆಲ್ ಬೆಲೆ ಮಾಡಿದ್ದಾರೆ. ಇನ್ನು 19 ರೂಪಾಯಿ 20 ಪೈಸೆ ಬಿಟ್ಟರೆ, ಉಳಿದವು ಎಲ್ಲವೂ ಕೂಡ ಇವರು ಮತ್ತು ಕೇಂದ್ರ ಸರ್ಕಾರ ಹಾಕತಕ್ಕಂತಹ ಕಸ್ಟಮ್ ಡ್ಯೂಟಿ ಹಾಗೂ ಎಕ್ಸೈಸ್ ಡ್ಯೂಟಿ ಮತ್ತೆ, ಇದು ಸರ್ಕಾರ ತನ್ನ ಜವಾಬ್ದಾರಿಯನ್ನು ನುಸುಳಿಕೊಂಡು ಸಾಮಾನ್ಯ ಜನರ ಮೇಲೆ ಹೊರೆ ಹಾಕತಕ್ಕಂತಹ ಈ ಸರ್ಕಾರದ ಜನ ವಿರೋಧಿ ಧೋರಣೆ ಇದೆಯಲ್ಲಾ, ಇದನ್ನು ಖಂಡಿತವಾಗಿಯೂ ಸಹಿಸುವುದಕ್ಕೆ ಸಾಧ್ಯವಿಲ್ಲ. ಪೆಟ್ರೋಲ್ ಹಾಗೂ ಡೀಸೆಲ್ ರೇಟ್ ಜಾಸ್ತಿಯಾಗಿರುವುದು ನಿಜ. ಆದರೆ ಅಲ್ಲಿ ಜಾಸ್ತಿಯಾಗಿರುವುದು ಎಷ್ಟು? ನೀವು ಮಾಡಿರುವುದು ಎಷ್ಟು? 73 ಡಾಲರ್ ಒಂದು ಬ್ಯಾರೆಲ್‌ಗೆ ಹೆಚ್ಚಾಗಿದೆ, ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ. ಅದರ ಪ್ರಕಾರ ಲೆಕ್ಕ ಹಾಕಿದರೂ ಕೂಡ ಇಂಡಿಯಾ ದೇಶದಲ್ಲಿ 19 ರೂಪಾಯಿ 20 ಪೈಸೆ ಮಾತ್ರ ಡೀಸೆಲ್ ರೇಟ್. ಇನ್ನು ಉಳಿದಿರುವುದೆಲ್ಲವೂ ಯಾವುದು? ಇವತ್ತು ಕಸ್ಟಮ್ಸ್ ಡ್ಯೂಟಿ ಎಕ್ಸೈಸ್ ಡ್ಯೂಟಿ ಸೇಲ್ಸ್ ಟ್ಯಾಕ್ಸ್ ಇವೆಲ್ಲವನ್ನೂ ಹಾಕಿ ಇವತ್ತು 38 ರೂಪಾಯಿಗಳಷ್ಟು ಮಾಡಿ ಬಸ್ ಚಾರ್ಜ್‌ನ್ನು ಜಾಸ್ತಿ ಮಾಡಿದರೆ ಅದು ಬರೀ ಬಸ್ ಚಾರ್ಜ್ ಅಲ್ಲ, ಜಾಸ್ತಿಯಾಗುವುದು, ಇಡೀ ಸಾರಿಗೆ ವ್ಯವಸ್ಥೆಯ ದರಗಳು ಹೆಚ್ಚಾಗುತ್ತದೆ. ತರಕಾರಿಯನ್ನು ಸಾಗಿಸುವಂತಹ ಲಾರಿಗಳವರು ರೇಟ್‌ನ್ನು ಜಾಸ್ತಿ ಮಾಡುತ್ತಾನೆ. ಟ್ರೈನ್‌ನಲ್ಲಿ ಟ್ರಾನ್ಸ್‌ಪೋರ್ಟ್ ಮಾಡುವವರು ಜಾಸ್ತಿ ಮಾಡುತ್ತಾರೆ. ಎಲ್ಲವೂ ರೇಟ್ ಜಾಸ್ತಿ ಮಾಡಿದಾಗ ಸಾಮಾನ್ಯ ಜನರು ಉಪಯೋಗಿಸುವಂತಹ ಎಲ್ಲಾ ವಸ್ತುಗಳ ದರಗಳೂ ಕೂಡ ಆಟೋಮ್ಯಾಟಿಕ್ ಆಗಿ ಏರಿಕೆಯಾಗುತ್ತದೆ. ಹಾಗಾಗಿ ಮಾನ್ಯ ಚಲುವರಾಯಸ್ವಾಮಿಯವರು ನಾನು ಬರೀ ಬಸ್ ದರವನ್ನು ಮಾತ್ರ ಏರಿಸಿದ್ದೇನೆ. ಅದರಿಂದ ಬೇರೆ ಏನೂ ಪರಿಣಾಮ ಇಲ್ಲ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ಬಸ್ ದರ ಏರಿಸುವುದು ಪೆಟ್ರೋಲ್ ಮತ್ತು ಡೀಸೆಲ್‌ನ್ನು ಏರಿಸಿದರೆ ಸಾಮಾನ್ಯ ಜನರ ಮೇಲೆ ಹೊರೆಯಾಗುತ್ತದೆ. ದಯವಿಟ್ಟು ತಾವು ಇದನ್ನು ಈ ರೀತಿಯಾಗಿ ಏರಿಸುವುದನ್ನು ವಾಪಸ್ಸು ಪಡೆಯಬೇಕು. ತಾವು ವಾಪಸ್ಸು ಪಡೆಯದೇ ಇದ್ದರೆ ನಾವು ಇಲ್ಲಿ ಧರಣಿ ಕೂರಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಪೆಟ್ರೋಲ್ ಹಾಗೂ ಡೀಸೆಲ್ ದರ ಹೆಚ್ಚಾದಾಗ ಇದು ಹಿಂದೆಯೂ ಕೂಡ ಹೆಚ್ಚಾಗಿದೆ. ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ಇವತ್ತು ಸಾಕಷ್ಟು

ಪರಿಣಾಮ ಪ್ರಯಾಣಿಕರಲ್ಲಿ ಇದರಿಂದ ದುಷ್ಪರಿಣಾಮವಾಗಿದೆ ಅದನ್ನು ತಾವೂ ಸಹ ಒಪ್ಪಿಕೊಳ್ಳುತ್ತೀರಿ. ಹಾಗಾಗಿ ತಾವು ಇದನ್ನು ವಿತ್‌ಡ್ರಾ ಮಾಡಬೇಕು. ನಾವು ಹಿಂದೆ ಈ ಬಗ್ಗೆ ಸಲಹೆಯನ್ನು ಸಹ ಕೊಟ್ಟಿದ್ದೆವು. ಹಣಕಾಸಿನ ಸಚಿವರು, ಉಪಮುಖ್ಯಮಂತ್ರಿಗಳು ಈ ಸದನದಲ್ಲಿ ಇಲ್ಲ. ಇವತ್ತು ಪೆಟ್ರೋಲ್ ದರ ಏನಿದೆ, ಇಡೀ ದೇಶದಲ್ಲಿ ಹೈಯೆಸ್ಟ್ ಇನ್ ಕರ್ನಾಟಕ. ಇವತ್ತು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ 28 ಪರ್ಸೆಂಟ್, ಇವತ್ತು ಟ್ಯಾಕ್ಸ್ ಇದೆ. ಇವತ್ತು ದೆಹಲಿಯ ಸರ್ಕಾರ, ಮಹಾರಾಷ್ಟ್ರ ಸರ್ಕಾರ, ಆಂಧ್ರ ಸರ್ಕಾರ ಹಲವಾರು ಸರ್ಕಾರಗಳು ಸೆಸ್ ಟ್ಯಾಕ್ಸ್ ಕಡಿಮೆ ಮಾಡಿ ಇವತ್ತು ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರೆ. ಅದೇ ತರಹವಾದ ಕ್ರಮ ನಿಮ್ಮ ಸರ್ಕಾರದವರು ತೆಗೆದುಕೊಂಡರೆ, ಆಟೋಮ್ಯಾಟಿಕಲಿ ನಿಮ್ಮ ದರವನ್ನು ಏರಿಸುವಂತಹ ಪ್ರಶ್ನೆ ಬರುವುದಿಲ್ಲ. ಈ ಸಲಹೆಯನ್ನು ತಾವು ಗಮನದಲ್ಲಿ ಇಟ್ಟುಕೊಳ್ಳಬೇಕು.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ.ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಈ ಬಗ್ಗೆ ತಾವು ಉತ್ತರವನ್ನು ತಾವು ಕೊಡಬೇಕು.

ಶ್ರೀ ಎನ್. ಚೆಲುವರಾಯಸ್ವಾಮಿ(ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬಹಳ ಅನುಭವ ಮತ್ತು ವಾಸ್ತವ ಸತ್ಯ ಗೊತ್ತಿರುವಂತಹ ಮೂರು ಜನ ಮಾನ್ಯ ಸದಸ್ಯರುಗಳು ಬಸ್ ದರ ಏರಿಸಿರುವ ಬಗ್ಗೆ ಮಾತನಾಡಿದ್ದಾರೆ. ನನಗೆ ಅವರ ಬಗ್ಗೆ ವೈಯಕ್ತಿಕವಾಗಿ ಗೌರವ ಇದೆ. ನಾನು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ಯಾವುದೇ ಪತ್ರಿಕೆಯ ಹೇಳಿಕೆಯಲ್ಲಿ ಬಸ್ ದರವನ್ನು ಹೆಚ್ಚಿಸುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿರುವುದಿಲ್ಲ. ಸಧ್ಯಕ್ಕೆ ಬಸ್ ದರವನ್ನು ಹೆಚ್ಚಿಸುವುದಿಲ್ಲವೆಂದು ಹೇಳಿದ್ದೇನೆ. ದಯಮಾಡಿ ತಾವು ಪತ್ರಿಕೆಯ ಹೇಳಿಕೆಯನ್ನು ಓದಬೇಕು. ನಾನು ಪತ್ರಿಕೆಯ ಹೇಳಿಕೆಯನ್ನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕಾಲಕಾಲಕ್ಕೆ ಸಂದರ್ಭಕ್ಕೆ ತಕ್ಕಂತೆ ಹೇಳಿಕೆಯನ್ನು ಕೊಡತಕ್ಕದ್ದು...

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಬಸ್ ದರವನ್ನು ಏರಿಕೆ ಮಾಡುವುದಿಲ್ಲವೆಂಬ ಪತ್ರಿಕೆಯ ಹೇಳಿಕೆಯ ಪೇಪರ್ ಕಟಿಂಗ್ಸ್‌ನ್ನು ನಾವು ಕೊಡುತ್ತೇವೆ. ಅದನ್ನು ತಾವು ನಂಬುವುದಿಲ್ಲ ಇದು ಪೇಪರ್ ಕಟಿಂಗ್ಸಾ..

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಉಪಾಧ್ಯಕ್ಷರೆ, ಸದ್ಯಕ್ಕೆ ಬಸ್ ದರ ಏರಿಸುವುದಿಲ್ಲವೆಂದರೆ ಏರಿಸುವುದಿಲ್ಲವೆಂಬ ಅರ್ಥವಲ್ಲ. ಅದು

ಏರಿಸುತ್ತೇವೆಂದೇ ಅರ್ಥ. ನಾವಂತೂ ಬಸ್ ದರವನ್ನು ಏರಿಸುವುದು ಗ್ಯಾರಂಟಿ ಎಂದು ಅವರು ಹೇಳುತ್ತಿದ್ದಾರೆ. ನೀವು ಕೂಡಾ ಆರ್ಗ್ಯುಮೆಂಟ್ ಮಾಡಬೇಕಾಗಿರುವುದು. The point is, ನೀವು ಪದೇ ಪದೇ ಹೇಳುತ್ತಿರುವುದು ಬಸ್ ದರವನ್ನು ಜಾಸ್ತಿ ಮಾಡಿದ್ದೀರಲ್ಲಾ ಸೇಲ್ಸ್‌ಟ್ಯಾಕ್ಸ್‌ನ್ನು ಕಡಿಮೆ ಮಾಡಿ. ಡೀಸೆಲ್ ಬೆಲೆ ಜಾಸ್ತಿಯಾಗಿದೆ, ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆಯಲ್ಲಾ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯು ವರ್ಷಕ್ಕೆ ಮೂರು ಬಾರಿ ಜಾಸ್ತಿಯಾಗಿದೆ. ಅದಕ್ಕೆ ಪ್ರಪೋಷಿನ್‌ನೇಟಾಗಿ ಸೇಲ್ಸ್‌ಟ್ಯಾಕ್ಸ್ ಜಾಸ್ತಿಯಾಗುತ್ತಾ, ಹೋಗುತ್ತದೆ. ಹಾಗಾದರೆ ನೀವು ಸೇಲ್ಸ್ ಟ್ಯಾಕ್ಸ್‌ನ್ನು ಕಡಿಮೆ ಮಾಡಿ. ನೀವು ಅದರ ಬಗ್ಗೆ ಎಲ್ಲಿ ಹೇಳಿದ್ದೀರಿ? ನೀವು ಕೇಂದ್ರ ಸರ್ಕಾರದವರು ಹೇಳಿರುವ ಬಗ್ಗೆ ಮಾತ್ರ ಹೇಳಿದ್ದೀರಿ. ನೀವು ಅಲ್ಲಿ ಯುಪಿಎ ಸರ್ಕಾರದಲ್ಲಿ ಇದ್ದುಕೊಂಡು ಹೇಳುತ್ತಿದ್ದೀರಿ. ಆದ್ದರಿಂದ ನಾನು ಏನು ಹೇಳುವುದೇನೆಂದರೆ, ನೀವು ಸೇಲ್ಸ್‌ಟ್ಯಾಕ್ಸ್‌ನ್ನೇ ಕಡಿಮೆ ಮಾಡಿ. ಈಗ 28 ಪರ್ಸೆಂಟ್ ಸೇಲ್ಸ್‌ಟ್ಯಾಕ್ಸ್ ಇದೆ. ಅದನ್ನು 21 ಪರ್ಸೆಂಟ್‌ಗೆ ಕಡಿಮೆ ಮಾಡಿ. ಹಾಗೆಯೇ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಕಡಿಮೆ ಮಾಡಿ. ಇವರಿಗೆ ಅದಾಯವೇನೂ ಕಡಿಮೆ ಇರುವುದಿಲ್ಲ. ಸರ್ಕಾರಕ್ಕೆ ಬರತಕ್ಕಂತಹ ತೆರಿಗೆಯನ್ನೂ ಕಡಿಮೆಯಾಗುವುದಿಲ್ಲ ಬಿಕಾಸ್ 3 ಸಾರಿ ಬೆಲೆ ಏರಿಸಿರುವುದರಿಂದ ನಾವು ಎಷ್ಟು ತೆರಿಗೆಯನ್ನು ನಿರೀಕ್ಷೆ ಮಾಡಿದ್ದೇವೋ ಅಷ್ಟು ತೆರಿಗೆಯು ಬಂದೇ ಬರುತ್ತದೆ. ನೀವು ಬಸ್ ದರವನ್ನು ಕಡಿಮೆ ಮಾಡಿ. ಈಗ ಬಸ್‌ನವರು 10 ಪೈಸೆಯನ್ನು ಜಾಸ್ತಿ ಮಾಡಿದ್ದಾರೆ. ಅದು ಜಾಸ್ತಿಯಾಗಿರುತ್ತದೆ. 10 ಪೈಸೆ ಜಾಸ್ತಿಯಾಗಿ ಮಾಡಿರುವುದು ಸಾರಸಗಟಾಗಿ ಅ್ಯವರೇಜ್ ಮಾಡಿರುವುದನ್ನು ನೋಡಿದರೆ 10 ಪರ್ಸೆಂಟ್ ಜಾಸ್ತಿ ಮಾಡಿದ್ದಾರೆ. ಅವರು ಬೆಲೆಯನ್ನು ಹೆಚ್ಚು ಮಾಡಿರಲಿಲ್ಲ. ಇವರು ಬೆಲೆಯನ್ನು ಕಡಿಮೆ ಮಾಡುವುದಿಲ್ಲವೆಂದರೆ ನೀವು ಸೇಲ್ಸ್‌ಟ್ಯಾಕ್ಸ್‌ನ್ನು ಕಡಿಮೆ ಮಾಡಬೇಕು. ಆಗ ರಾಜ್ಯದಲ್ಲಿ ಡೀಸೆಲ್ ಬೆಲೆ ಕಡಿಮೆಯಾಗುತ್ತದೆ, ಬಸ್‌ದರವೂ ಕೂಡ ಕಡಿಮೆಯಾಗುತ್ತದೆ. ಬಸ್ ದರ ಏರಿಸುವುದೂ ಸಹ ಕಡಿಮೆಯಾಗುತ್ತದೆ. ನೀವು ಬಸ್ ದರ ಏರಿಸುವುದನ್ನು ಬಿಡಬಹುದಾಗಿತ್ತು. ಚೀಫ್ ಮಿನಿಸ್ಟರ್ ಮತ್ತು ಡೆಪ್ಯುಟಿ ಚೀಫ್ ಮಿನಿಸ್ಟರ್ ನಾವು ಸೇಲ್ಸ್‌ಟ್ಯಾಕ್ಸ್‌ನ್ನು ಕಡಿಮೆ ಮಾಡುತ್ತೇವೆಂದು ಬಹಿರಂಗವಾಗಿಯೇ ಹೇಳಿದ್ದಾರೆ. Both of them made a statement that they are going to reduce the sales tax. Let the Government take a decision to reduce the price of diesel and petrol.

5.00 ಪಿಎಂ

ಶ್ರೀ ಎನ್.ಚೆಲುವರಾಯಸ್ವಾಮಿ: ಪತ್ರಿಕೆಯ ಹೇಳಿಕೆಯ ಬಗ್ಗೆ ಬಹಳ ಗೌರವ ಇದೆ. ಇದರಲ್ಲಿ ಕೆಲವೊಮ್ಮೆ ವ್ಯತ್ಯಾಸವಾಗಬಹುದು. ನಾವು ಮಾತನಾಡುವಾಗ ಅಲ್ಲಿ ಕುಳಿತು ಮಾತನಾಡುವುದಕ್ಕೂ ಇಲ್ಲಿ ಕುಳಿತು ಮಾತನಾಡುವುದಕ್ಕೂ ಅದೇ ವ್ಯಕ್ತಿ ಮಾತನಾಡಿದರೆ ಒಂದೊಂದು ಪದಗಳು ವ್ಯತ್ಯಾಸವಾಗುತ್ತದೆ. ಬರವಣಿಗೆಯಲ್ಲಿ ವ್ಯತ್ಯಾಸವಾಗಬಹುದು. ವ್ಯತ್ಯಾಸಕ್ಕೂ ಕೂಡ ಸಂಪೂರ್ಣವಾಗಿ ಪತ್ರಿಕೆಯಲ್ಲಿ ಬರೆಯುವುದು ಸುಳ್ಳು ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಈ ರೀತಿಯ ಪ್ರತಿಕ್ರಿಯೆಯನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ ಬಹುಶಃ ಬಸ್ ದರವನ್ನು ಹೆಚ್ಚು ಮಾಡಿರುವ ಪರಿಸ್ಥಿತಿಯಲ್ಲಿರುವ ಸನ್ನಿವೇಶಗಳನ್ನು ನೋಡಿದಾಗ ಬಹುಶಃ ಸಾರಿಗೆ ಸಚಿವನಾಗಿ ನಾನು ಸಂಸ್ಥೆಯ ಹಾಗೂ ಜನರ ಒಳಿತನ್ನು ಸಹ ಯೋಚನೆ ಮಾಡಿ ಮಾಡಿದ್ದಾರೆಂದು ಅಪ್ರೀಸಿಯೇಷನ್ ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೆನು. ಏತಕ್ಕೋ ನನ್ನ ಟೈಮ್ ಸರಿಯಾಗಿಲ್ಲವೆಂದು ನನಗೆ ಅನ್ನಿಸುತ್ತಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಇದು ಜಸ್ಟಿಫಿಕೇಷನ್ ಅಲ್ಲವೇ ಅಲ್ಲ.

ಶ್ರೀ ಎನ್.ಚೆಲುವರಾಯಸ್ವಾಮಿ : ಸರ್, ಸ್ವಲ್ಪ ನೀವು ದಯಮಾಡಿ ಕುಳಿತುಕೊಳ್ಳಿ, ನೀವು ನಮ್ಮ ಹಳೆಯ ನಾಯಕರು, ನಿಮ್ಮ ಬಗ್ಗೆ ನಮಗೆ ಗೌರವವಿದೆ. ಹಾಗಾಗಿ ನಾನು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ. ಡಿಸೆಂಬರ್ 2001 ರಲ್ಲಿ 30 ಬಾರಿ ಡೀಸೆಲ್ ಬೆಲೆ ಜಾಸ್ತಿಯಾಗಿದೆ. ಆದರೆ ಕೆ.ಎಸ್.ಆರ್.ಟಿ.ಸಿ. ದರ 8 ಬಾರಿ ಮಾತ್ರ ಹೆಚ್ಚು ಮಾಡಿದ್ದೇವೆ. ಅದರಲ್ಲಿ ಕಡಿಮೆ ಮಾಡಿರುವ ದಾಖಲೆ ಇದೆ. ಡಿಸೆಂಬರ್‌ನಲ್ಲಿ 2.20 ರಿಂದ 2.30 ಪೈಸೆಯಷ್ಟು ದರವನ್ನು ಹೆಚ್ಚು ಮಾಡಿದೆ, ಸಂಸ್ಥೆಯ ದರವನ್ನು ಹೆಚ್ಚು ಮಾಡಬೇಕೆಂದು ಪ್ರಯತ್ನ ಮಾಡಿದಾಗ ಸರ್ಕಾರ ಮಧ್ಯೆ ಪ್ರವೇಶಿಸಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಚಿವರಾಗಿದ್ದಾಗ ದರವನ್ನು ಹೆಚ್ಚಿಸಿದರೆ ಬಡ ಜನರಿಗೆ ಹೊರೆಯಾಗುತ್ತದೆಂದು ಸರ್ಕಾರ ಸ್ವಲ್ಪ ಅದಕ್ಕೆ ಏನಾದರೂ ಕಾಂಪನ್‌ಸೇಷನ್ ಮಾಡಲಿಕ್ಕೆ ಒಂದು ವಿಚಾರ ಮಾಡಿ ದರವನ್ನು ಹೆಚ್ಚು ಮಾಡುವುದು ಬೇಡವೆಂದು ನಿರ್ಧರಿಸಿ ಸಂಸ್ಥೆಯ ಎಲ್ಲಾ ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತಂದು ಅಂದಿನ ಉಪಮುಖ್ಯಮಂತ್ರಿಗಳು ಹಿಂದೆ ಇದ್ದಂತಹ ಚೇರ್ಮನ್‌ರವರು ಸರ್ಕಾರದಿಂದ ಹಣ ಕೊಡಿಸಲಿಕ್ಕೆ ಪ್ರಯತ್ನ ಮಾಡಿದ್ದರು. ಇದಕ್ಕಾಗಿ 78–80 ಕೋಟಿ ರೂಪಾಯಿ ಜಾಸ್ತಿ ಆಗಿತ್ತು. ಆಗ ಸ್ವಲ್ಪ ಸ್ವಲ್ಪ ಹಣವನ್ನು ಕೊಡಿಸಲಿಕ್ಕೆ ಪ್ರಯತ್ನ

ಆಗಿತ್ತು. ಸರ್ಕಾರ ಇವತ್ತಿನ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ಸ್ವಲ್ಪ ಹೆಚ್ಚು ಮಾಡಲಿಕ್ಕೆ ಒತ್ತಡವನ್ನು ಸಂಸ್ಥೆಯಲ್ಲಿ ತಂದಾಗ ನಾನು ಉಪ ಮುಖ್ಯಮಂತ್ರಿಯವರೊಂದಿಗೆ ಚರ್ಚೆ ಮಾಡಿ ಜನರಿಗೆ ಹೊರೆಯಾಗುತ್ತದೆ. ಈ ಸಂದರ್ಭದಲ್ಲಿ ಹೆಚ್ಚು ಮಾಡುವುದು ಬೇಡ. ಬೇರೆ ಯಾವುದಾದರೂ ರೂಪದಲ್ಲಿ ಅದನ್ನು ಸರಿಪಡಿಸಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೇನೆ. ಸರ್ಕಾರ ಜನವರಿಯವರೆಗೆ ಯಾವುದೇ ಕಾರಣಕ್ಕೂ ಬಸ್‌ದರವನ್ನು ಹೆಚ್ಚಿಸುವುದು ಬೇಡವೆಂದು ತೀರ್ಮಾನಿಸಿತ್ತು. ಅದಾದ ಮೇಲೆ ಮಾಧ್ಯಮದವರು ನನ್ನ ಮುಂದೆ ಡೀಸೆಲ್ ಬೆಲೆ ಹೆಚ್ಚು ಮಾಡಿದರೆ ಏನು ಮಾಡುತ್ತೀರೆಂದು ಪ್ರಶ್ನೆ ಮಾಡಿದರು. ಆಗ ಹೆಚ್ಚು ಮಾಡಬೇಕಾಗಿ ಬರಬಹುದು ಎಂದು ಎಲೆಕ್ಟ್ರಾನಿಕ್ ಮಾಧ್ಯಮ ಪತ್ರಿಕೆಯವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಅಂದರೆ ಇವತ್ತು ನಾನು ಉಪಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದೇನೆ. ಎಲ್ಲೋ ಒಂದು ಕಡೆ ಮೈಸೂರು–ತುಮಕೂರಿಗೆ ಹೊರಟಾಗ ಎಲ್ಲೋ ಒಂದು ಸ್ಟೇಜ್‌ನಲ್ಲಿ 10 ರಿಂದ 12% ಹೆಚ್ಚು ಆಗಬಹುದು. ಹೆಚ್ಚು ಆಗುತ್ತಿಲ್ಲ ಎನ್ನುವ ಪ್ರಶ್ನೆಯಿಲ್ಲ. ಈ ಸೂಚನೆಯನ್ನು ಎಲ್ಲಾ ಅಧಿಕಾರಿಗಳಿಗೆ ನೀಡಿದ್ದೇನೆ. ಇವತ್ತು 2004ರಲ್ಲಿ ಒಂದು ಬಾರಿ ಹೆಚ್ಚು ಆಗಿದೆ. 13% 2005 ರಲ್ಲಿ ಹೆಚ್ಚು ಆಗಿತ್ತು. ಡಿಸೆಂಬರ್‌ನಲ್ಲಿ ಡೀಸೆಲ್ ಬೆಲೆ ಜಾಸ್ತಿಯಾಗಿತ್ತು. ಆಗಲೂ ದರವನ್ನು ಹೆಚ್ಚಿಗೆ ಮಾಡಲಿಲ್ಲ. ಆದರೆ ಇವತ್ತು ಹೆಚ್ಚು ಮಾಡದಿದ್ದರೆ ಒಂದು ಕಡೆ ಡೀಸೆಲ್ ಬೆಲೆ ಜಾಸ್ತಿಯಾಗುತ್ತದೆ. ಆದರೂ ಸ್ಟೂಡೆಂಟ್ ಪಾಸ್ ಜಾಸ್ತಿ ಮಾಡಿಲ್ಲ, ಬ್ಲೈಂಡ್ ಪಾಸ್ ಬೆಲೆ ಜಾಸ್ತಿ ಮಾಡಿಲ್ಲ, ಫ್ರೀಡಮ್ ಫೈಟರ್ಸ್ ಪಾಸ್ ಜಾಸ್ತಿ ಮಾಡಿಲ್ಲ, ಮತ್ತು ಲಗೇಜಸ್ ದರ ಜಾಸ್ತಿ ಮಾಡಿಲ್ಲ. ಗ್ರಾಮೀಣವಾಸಿಗಳಿಗೆ ಅನುಕೂಲ ಆಗುವ ದೃಷ್ಟಿಯಲ್ಲಿ ನಾವು, ಕೆಲಸ ಮಾಡುವ ಸಂಸ್ಥೆಯು ಪಬ್ಲಿಕ್ ಪ್ರಾಪರ್ಟಿಯಾಗಿದ್ದು ಆ ಸಂಸ್ಥೆ ಆದಾಯ ದೃಷ್ಟಿಯಿಂದ ಕೆಲಸ ಮಾಡುವ ಪ್ರಶ್ನೆಯಲ್ಲ. ಆದರೆ ಎಲ್ಲಾ ರೀತಿಯ ಭದ್ರತೆಯು ಇರಬೇಕಾಗುತ್ತದೆ. ತಮಿಳುನಾಡಿಗೆ ಹೋಲಿಕೆ ಮಾಡಿದರೆ, ಹಾಗೂ ಎಲ್ಲಾ ರಾಜ್ಯಗಳ ಬಸ್ ದರಗಳಿಗಿಂತ ನಮ್ಮ ರಾಜ್ಯದ ಬಸ್ ಪ್ರಯಾಣ ದರ ಕಡಿಮೆ ಇದೆ. ಇಡೀ ರಾಷ್ಟ್ರದಲ್ಲಿ ನಮ್ಮ ಸಂಸ್ಥೆಯು ಒಳ್ಳೆಯ ಮಾದರಿಯಾಗಿ ಉತ್ತಮವಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಬಸ್ ದರವನ್ನು ಹೆಚ್ಚು ಕಡಿಮೆ ಮಾಡುವಾಗ ಇದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳ ಮುಖಾಂತರ ಒಂದು ಮನವಿಯನ್ನು ಸಲ್ಲಿಸಿದ್ದೇವೆ. ಹಿಂದೆ ಈ ಸಂಸ್ಥೆಗೆ ಹೆಚ್ಚಿನ ಅನುದಾನ ಇತ್ತು. ಆಗ ಟ್ಯಾಕ್ಸ್ ಕಡಿಮೆ ಮಾಡಲಿಕ್ಕೆ ಅವಕಾಶವಿತ್ತು. ಸೇಲ್ಸ್ ಟ್ಯಾಕ್ಸ್ ಬಗ್ಗೆ ಸಹ ಮಾನ್ಯ

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದ್ದೇನೆ. ಇವೆಲ್ಲಾ ಯಾವುದೂ ಆಗದಿದ್ದರೆ ಕನಿಷ್ಠ 12–13% ರಷ್ಟು ಸಂಸ್ಥೆ ಹೆಚ್ಚು ಮಾಡಬೇಕಾಗುತ್ತದೆ. ಆದರೆ ಜನರ ಮೇಲೆ ಹೊರೆ ಹೆಚ್ಚು ಆಗುವಂಥ ಅನಿವಾರ್ಯ ಪರಿಸ್ಥಿತಿಯಲ್ಲಿ 8% ಜಾಸ್ತಿ ಮಾಡುತ್ತಿದ್ದೇವೆ. ಸಂಸ್ಥೆಯ ಹಿತದೃಷ್ಟಿಯಿಂದ ಸಂಸ್ಥೆ ಸಾರ್ವಜನಿಕರಿಗಾಗಿಯೇ ಇರುವಂಥ ಪರಿಸ್ಥಿತಿಯಲ್ಲಿ ಎಲ್ಲಾ ಶಾಸಕರೊಂದಿಗೆ ಕಳೆದ ಸದನದಲ್ಲಿ ಮಾತನಾಡಿದಾಗ ಒಂದು ತಿಂಗಳ ಹಿಂದೆ ಸಭೆಯನ್ನು ಕರೆದು ಮಾತನಾಡಿದ್ದೇನೆ. ಶಾಸಕರು ಕೇಳಿದ ಕಡೆಗಳಿಗೆ ಹೊಸ ಬಸ್‌ಗಳನ್ನು ಹಾಕಬೇಕು. ಈಗಿರುವ ಬಸ್‌ಗಳನ್ನು ಇಟ್ಟುಕೊಂಡರೆ ಇಲಾಖೆ ನಡೆಸಲಿಕ್ಕೆ ಆಗುವುದಿಲ್ಲ, ಹೆಚ್ಚು ಬಸ್‌ಗಳನ್ನು ಕೊಂಡುಕೊಳ್ಳಲಿಕ್ಕೆ ತೀರ್ಮಾನ ಮಾಡಿದ್ದೇವೆ. ತಾವು ಹೇಳುವುದು ಸರಿ, ಜನರಿಗೆ ತೊಂದರೆಯಾಗದಂತೆ ಕೆಲಸ ಮಾಡುವಂತೆ ಸೂಚಿಸಿದ್ದೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿಯೂ ಸಹ ಮಾತನಾಡಿದ್ದೇನೆ. ಬಹುಶಃ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಇದರ ಬಗ್ಗೆ ಹಣಕಾಸಿನ ಸಚಿವರೂ ಆದ ಮಾನ್ಯ ಉಪ ಮುಖ್ಯಮಂತ್ರಿಗಳು ನಿರ್ಣಯಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಉಪ ಮುಖ್ಯಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ಡಿಸ್‌ಕಸ್ ಮಾಡುವುದಾಗಿ ಹೇಳಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ : ಇಬ್ಬರೂ ಚರ್ಚೆ ಮಾಡಿದ್ದೇವೆ. ಕ್ಯಾಬಿನೆಟ್‌ನಲ್ಲಿ ಡಿಸ್‌ಕಸ್ ಆಗಬೇಕಾಗಿದೆ. ಅವರಿಬ್ಬರ ಪ್ರಯತ್ನದಲ್ಲಿ ಉಳಿದಿದೆ. ಈ ಹಿನ್ನೆಲೆಯಲ್ಲಿ ತಮ್ಮ ಮೂಲಕ ಎಲ್ಲಾ ಹಿರಿಯ ಸದಸ್ಯರು ಈ ಸ್ಟಾಂಡ್ ಅನ್ನು ಕೈಬಿಡಬೇಕು. ಮುಂದೆ ಈ ಸಂಸ್ಥೆಯಿಂದ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಾರಿಗೆ ಸಚಿವರಿಂದ ಇದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ. ದರವನ್ನು ಕಡಿಮೆ ಮಾಡುತ್ತಾರೆಂಬ ಆಶ್ವಾಸನೆ ನೀಡಿದ್ದು ಅವರು ಹಾಗೆ ಮಾಡಲಿಲ್ಲ. ಹಾಗಾಗಿ ಇದರಿಂದ ಸಾಮಾನ್ಯ ಜನರ ಮೇಲೆ ತೀವ್ರವಾದ ಹೊರೆ ಆಗುವುದರಲ್ಲಿ ಅನುಮಾನವೇ ಇಲ್ಲ. ಇವತ್ತು ಬಸ್ ದರ ಕಡಿಮೆ ಆಗಬಹುದೆಂದು ಭರವಸೆಯನ್ನು ಕೊಟ್ಟಿದ್ದರೆ ನಮಗೆ ನಿಜಕ್ಕೂ ಸಂತೋಷವಾಗುತ್ತಿತ್ತು. ಅವರ ಬಗ್ಗೆ ಗೌರವ ಇಟ್ಟುಕೊಳ್ಳುತ್ತಿದ್ದೆವು. ಆದರೆ ಇವರು ನೀಡಿರುವ ಹೇಳಿಕೆಯನ್ನು ವಿರೋಧಿಸಿ ನಾನು ಧರಣಿಯನ್ನು ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಶಾಸಕರಾದ ಶ್ರೀ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಸಭಾಧ್ಯಕ್ಷರ ಮುಂದಿರುವ ಬಾವಿಗೆ ಬಂದು ನಿಂತರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಮಂತ್ರಿಗಳು ನೀವು ಲಗೇಜ್ ರೇಟ್ ಜಾಸ್ತಿ ಮಾಡಿಲ್ಲವೆಂದು ಹೇಳಿದ್ದೀರಿ. ಲಾರಿ ಸಾಗಾಣಿಕೆ ಚಾರ್ಜಸ್ ಜಾಸ್ತಿ ಮಾಡಿದರೆ ಟ್ರಾಕ್ಟರ್‌ನಿಂದ ಉಳುಮೆ ಮಾಡಲಿಕ್ಕೆ ರೇಟ್ ಜಾಸ್ತಿ ಮಾಡಿದರೆ, ಆಹಾರ ಸಾಮಗ್ರಿಗಳ ಸಾಗಾಣಿಕೆ ವೆಚ್ಚ ಜಾಸ್ತಿ ಆಗುತ್ತದೆ. ಅಕ್ಕಿ, ರಾಗಿ, ಇವೆಲ್ಲಾ ಲಾರಿಗಳಲ್ಲಿ ಸಾಗಿಸಬೇಕಾಗಿರುವುದರಿಂದ ಲಾರಿಯ ಸಾಗಾಣಿಕೆ ವೆಚ್ಚ ಜಾಸ್ತಿಯಾಗುತ್ತದೆ. ಸೇಲ್ಸ್ ಟ್ಯಾಕ್ಸ್ ಅನ್ನು ಕಡಿಮೆ ಮಾಡಬೇಕು.

ಕಸ್ಟಮ್ಸ್ ಎಕ್ಸೈಸ್ ನಮ್ಮ ಕೈಯಲ್ಲಿ ಇಲ್ಲ. ನಿಮಗೆ ಪ್ರಾಮಾಣಿಕತೆ ಇದ್ದರೆ ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡಿ. ಇದರಿಂದ, ಕನಿಷ್ಠ ಬಡವರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ. ಸೇಲ್ಸ್ ಟ್ಯಾಕ್ಸ್ ಜಾಸ್ತಿ ಇರುವುದರಿಂದ, ಡೀಸೆಲ್ ರೇಟ್ ಕೂಡ ಜಾಸ್ತಿಯಾಗುತ್ತದೆ. ಆಂಧ್ರ, ಕೇರಳ, ತಮಿಳುನಾಡಿಗಿಂತ ಹೈಯೆಸ್ಟ್ ಇರುವುದೇ ಇಲ್ಲಿ. ಡೀಸೆಲ್ ಆಂಧ್ರಕ್ಕಿಂತ ಒಂದೂವರೆ ರೂಪಾಯಿ ಜಾಸ್ತಿ ಇದೆ. ತಮಿಳುನಾಡಿನಲ್ಲಿ ಮತ್ತು ಕೇರಳದಲ್ಲಿ ಕಡಿಮೆ ಇದೆ. ಏಕೆಂದರೆ, ಅಲ್ಲಿ ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡಿದ್ದಾರೆ. ನೀವೂ ಸೆಲ್ಸ್ ಟ್ಯಾಕ್ಸ್ ಕಡಿಮೆ ಮಾಡಿದರೆ, ಬಸ್ ದರವನ್ನೂ ಕಡಿಮೆ ಮಾಡಬಹುದು. ಈಗ ನೀವು ಕೊಟ್ಟಿರತಕ್ಕ ಹೇಳಿಕೆಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಂಸ್ಥೆಯು ಉಳಿಯಬೇಕೆಂಬ ವಿಚಾರದಲ್ಲಿ ನಮಗೂ ಕಾಳಜಿ ಇದೆ. ಹೀಗಾಗಿ, ನಿಮ್ಮ ಉತ್ತರವನ್ನು ವಿರೋಧಿಸಿ, ನಾನು ಧರಣಿ ಮಾಡುತ್ತಿದ್ದೇವೆ.

(ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು, ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ಬಂದು ಧರಣಿಗೆ ನಿಂತರು.)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸಚಿವರು ಸಚಿವ ಸಂಪುಟದಲ್ಲಿ ಚರ್ಚೆ ಮಾಡುತ್ತೀರೋ ಎಲ್ಲಿ ಚರ್ಚೆ ಮಾಡುತ್ತೀರೋ ನನಗೆ ಗೊತ್ತಿಲ್ಲಾ. ಹೇಗಾದರೂ ಮಾಡಿ, ಡೀಸೆಲ್ ಮೇಲಿನ ಸುಂಕವನ್ನು ಕಡಿಮೆ ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರು ಒಳ್ಳೆಯ ಸಲಹೆಯನ್ನು ಕೊಟ್ಟರು. ಇವತ್ತು ಕರ್ನಾಟಕದಲ್ಲಿ ಹೈಯೆಸ್ಟ್ ಟ್ಯಾಕ್ಸ್ ಇದೆ. ಇದರಿಂದ, ಕೆ.ಎಸ್.ಆರ್.ಟಿ.ಸಿ.ಯವರಿಗೆ, ಲಾರಿಯವರಿಗೆ ಅನುಕೂಲವಾಗುತ್ತದೆ. ಇವತ್ತು ಮಾನ್ಯ ಪ್ರಕಾಶ್‌ರವರು ನಮ್ಮ ರಕ್ಷಣೆಗೆ ಬರಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿಕೆ ಮಾಡಿರುವುದು ನಿಜ. ಆದ್ದರಿಂದ, ಟ್ಯಾಕ್ಸ್ ಕಡಿಮೆ ಮಾಡಿ, ಡೀಸೆಲ್ ಮತ್ತು ಪೆಟ್ರೋಲ್ ಬೆಲೆಯನ್ನು ಆದಷ್ಟು ಬ್ಯಾಲೆನ್ಸ್ ಮಾಡುವುದಕ್ಕೆ ಪ್ರಯತ್ನಮಾಡುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು) : ಬಹಳ ಜವಾಬ್ದಾರಿಯಿಂದ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳೂ ಈ ದಿಸೆಯಲ್ಲಿ ಯೋಚನೆ ಮಾಡಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಿ, ಸಚಿವ ಸಂಪುಟದಲ್ಲಿ ಚರ್ಚಿಸಿ, ತೀರ್ಮಾನ ತೆಗೆದುಕೊಂಡ ನಂತರ ಈ ಬಗ್ಗೆ ಪ್ರತಿಕ್ರಿಯೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, ಕೇಂದ್ರ ಸರ್ಕಾರದವರು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏರಿಸಿದ ತಕ್ಷಣವೇ ಈ ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡುತ್ತೇವೆಂದು ಹೇಳಿದ್ದರು. ಆಮೇಲೆ, ಕಡಿಮೆ ಮಾಡಿ ಎಂದು ಕೇಂದ್ರ ಸರ್ಕಾರದವರನ್ನು ಕೇಳಿಕೊಳ್ಳಲಾಗುವುದೆಂದೂ ಹೇಳಿದ್ದರು. ನೀವು ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರನ್ನು ಕೇಳಬೇಕಾದ ಅಗತ್ಯ ಇಲ್ಲ. ನೀವೇ ಕಡಿಮೆ ಮಾಡಬಹುದು. ಸರ್ಕಾರವೇ ಕಡಿಮೆ ಮಾಡುವುದಕ್ಕೆ ಅವಕಾಶ ಇದೆ. ಇಲ್ಲಿ ಬೇರೆ ಬೇರೆ ರಾಜ್ಯಗಳಿಗಿಂತ ಸ್ವಲ್ಪ ಜಾಸ್ತಿ ಇದೆ. ತಮಿಳುನಾಡಿಗಿಂತ, ಕೇರಳಕ್ಕಿಂತ, ಆಂಧ್ರಕ್ಕಿಂತ ಸ್ವಲ್ಪ ಜಾಸ್ತಿ ಇದೆ. ಈಗಾಗಲೇ ಮೂರು ಸಾರಿ ಪೆಟ್ರೋಲ್ ಬೆಲೆ ಜಾಸ್ತಿಯಾಗಿರುತ್ತದೆ. ನಮಗೆ ಸೇಲ್ಸ್ ಟ್ಯಾಕ್ಸ್ ಜಾಸ್ತಿ ಬರುತ್ತಿದೆ. ಅಲ್ಲಿ ಸೋರಿ ಹೋಗುವುದು ಬಹಳ ಕಡಿಮೆ. ರಾಜ್ಯಕ್ಕೆ ಹೆಚ್ಚು ತೆರಿಗೆ ಇದರಿಂದ ಬರುತ್ತದೆ. ಎರಡನೆಯದು, ನೀವು ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡುವುದರಿಂದ, ಡೀಸೆಲ್ ಮತ್ತು ಪೆಟ್ರೋಲ್ ದರವೂ ಕೂಡ ಕಡಿಮೆಯಾಗುತ್ತದೆ. ಬೇರೆ ರಾಜ್ಯಗಳಿಗಿಂತ 50 ಪೈಸೆ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿ ಇದೆ. ಈ ಕಾರಣದಿಂದ ಸರ್ಕಾರಕ್ಕೆ ಯಾವುದೇ ಕಾರಣಕ್ಕೂ ತೆರಿಗೆಯಲ್ಲಿ ಕಡಿಮೆಯಾಗುವುದಿಲ್ಲ. ನಮಗೆ ಇನ್ನೂ ಹೆಚ್ಚಿಗೆಯೇ ಬರುತ್ತದೆ. ಈ ಕಾರಣದಿಂದ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪೂರ್ಣವಾಗಿ ಕಡಿಮೆ ಮಾಡಬಹುದು. ಈಗಾಗಲೇ ನೀವು ಬಸ್ ದರವನ್ನು ಏರಿಸಿದ್ದೀರಿ. ಪೆಟ್ರೋಲ್, ಡೀಸೆಲ್ ಬೆಲೆಯನ್ನು ಕೇಂದ್ರ ಸರ್ಕಾರದವರು ಹೆಚ್ಚಿಸಿದ್ದರಿಂದ, ನಾವು ದರವನ್ನು ಹೆಚ್ಚು ಮಾಡಬೇಕಾಯಿತು ಎಂಬ ಕಾರಣವನ್ನು ಕೊಡುತ್ತಿದ್ದೀರಿ ಜೊತೆಗೆ, ನಾವು ಕಷ್ಟದ ಪರಿಸ್ಥಿತಿಯಲ್ಲಿ ಇದ್ದೇವೆಂದೂ ಹೇಳಿದ್ದೀರಿ. ಇದನ್ನು ನೀವು ತಪ್ಪಿಸಬೇಕು. ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡಿದರೆ, ನೀವು ಬಸ್ ದರವನ್ನು ಹೆಚ್ಚು ಮಾಡುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಪರೋಕ್ಷವಾಗಿ ಆಗರತಕ್ಕ ತೊಂದರೆಗಳು ಬಹಳ ಇವೆ. ಈ ಕಾರಣಕ್ಕೋಸ್ಕರ ಅಂದರೆ, ನೀವು ಬಸ್ ದರವನ್ನು ಏರಿಸಿದ್ದರಿಂದ, ಅಗತ್ಯ ವಸ್ತುಗಳ ಬೆಲೆಗಳೂ ಹೆಚ್ಚಾಗುತ್ತವೆ.

ನೀವು ಯಾವಾಗಲೂ "ಅಭಿವೃದ್ಧಿ ರಂಗ" ಎಂದು ಹೇಳುತ್ತೀರಿ. ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಸಾಮಾನ್ಯ ಜನರಿಗೆ ದೊಡ್ಡ ಹೊರೆಯಾಗಿದೆ. ಈ ಹೊರೆಯನ್ನು ಇಳಿಸುವುದು ಒಳ್ಳೆಯದು. ಈ ಬಗ್ಗೆ ನಿಮಗೆ ಕಾಳಜಿ ಇದ್ದರೆ, ಕೂಡಲೇ ಈ ವಿಷಯವನ್ನು ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗಬೇಕು. ಈಗಾಗಲೇ ಬಸ್ ದರವನ್ನು ಏರಿಸಿದ್ದೀರಿ, ಮತ್ತೆ ನೀವು ಯಾವಾಗ ಕಡಿಮೆ ಮಾಡುವುದು? ಆದ್ದರಿಂದ, ನೀವು ಯಾವುದೇ ನೆಪಗಳನ್ನು ಒಡ್ಡದೆ, ಕೂಡಲೇ ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡಿ, ಆ ಮೂಲಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನೂ ಇಳಿಸಬೇಕು. ಟ್ಯಾಕ್ಸ್ ಕಡಿಮೆ ಮಾಡುತ್ತೇನೆಂದು ಈಗಾಗಲೇ ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ, ನೀವು "ಯು ಟರ್ನ್" ಬಿಟ್ಟು ಕೂಡಲೇ ಟ್ಯಾಕ್ಸ್ ಕಡಿಮೆ ಮಾಡಬೇಕೆಂದು ನಾನು ಕೂಡ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರದವರು ಈ ಬಗ್ಗೆ ಬೇರೆ ನಿರ್ಧಾರಕ್ಕೆ ಬರಬೇಕು. ಇಲ್ಲದೇ ಹೋದರೆ, ನಾವೂ ಕೂಡ ಧರಣಿ ಮಾಡುತ್ತೇವೆ.

(ಶ್ರೀ ಜೆ.ಸಿ. ಮಾಧುಸ್ವಾಮಿಯವರು ಧರಣಿ ಮಾಡುವುದಕ್ಕೆ ಸಭಾಧ್ಯಕ್ಷರ ಮುಂಭಾಗದಲ್ಲಿ ಬಂದು ನಿಂತರು)

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳಕ್ಕೆ ಬಹಳ ಸ್ಪಷ್ಟವಾಗಿ ಸೇಲ್ಸ್ ಟ್ಯಾಕ್ಸ್ ಕಾರಣ ಇದೆ. ಮಾನ್ಯ ಮಾಜಿ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ಈ ವಿಚಾರದಲ್ಲಿ ಸರ್ಕಾರದ ಜವಾಬ್ದಾರಿ ಇದೆ. ಸರ್ಕಾರದವರು ಈ ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡುವ ಮುಖಾಂತರ, ಜನಸಾಮಾನ್ಯರ ದಿನನಿತ್ಯದ ಬದುಕಿನ ಮೇಲೆ ಆಗುತ್ತಿರುವ ದುಷ್ಪರಿಣಾಮವನ್ನು ತಡೆಗಟ್ಟುವುದಕ್ಕೆ ಸಾಧ್ಯವಿದೆ. ಈ ಹಿಂದೆ ಸೀನಿಯರ್ ಸಿಟಿಜನ್ಸ್‌ಗೆ ಬಸ್ ಪಾಸ್ ಕೊಡುತ್ತಿದ್ದರು. ಆಮೇಲೆ, ವಿದ್ಯಾರ್ಥಿಗಳ ಬಸ್ ಪಾಸ್ ದರವನ್ನು ಕಡಿಮೆ ಮಾಡಬೇಕು. ಸಾರಿಗೆ ಇಲಾಖೆಯಲ್ಲಿ ಆಗುವ ಸೋರಿಕೆಯನ್ನು ತಡೆಗಟ್ಟಬೇಕು. ತಮಿಳುನಾಡಿನಲ್ಲಿ ಬೆಲೆ ಜಾಸ್ತಿ ಇಲ್ಲ. ಬೇರೆ ರಾಜ್ಯಗಳಲ್ಲೂ ಇದೇ ದರ ಇದೆಯೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಕರ್ನಾಟಕದಲ್ಲಿ ಜಾಸ್ತಿ ಇದೆಯೆಂದು ನನ್ನ ಗಮನಕ್ಕೂ ಬಂದಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಹೆಚ್ಚಳವನ್ನು ಇಳಿಸಬೇಕೆಂದು ಒತ್ತಾಯ ಮಾಡುತ್ತೇನೆ. ಬಿಡಿ ಭಾಗಗಳ ಬೆಲೆಯನ್ನು ಇಳಿಸಿ, ಸೋರಿಕೆ ಆಗುವುದಕ್ಕೆ ಕಡಿವಾಣ ಹಾಕಬೇಕು. ದುಬಾರಿ ವೆಚ್ಚವಾಗುವ ಕಡೆಗಳಲ್ಲೆಲ್ಲಾ ಇಳಿಸಬೇಕು. ಎಲ್ಲೆಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕೋ ಅಲ್ಲೆಲ್ಲಾ ಸೂಕ್ತ ಕ್ರಮಗಳನ್ನು

ಕೈಗೊಳ್ಳಬೇಕು. ಮುಖ್ಯವಾಗಿ, ಈ ಸೇಲ್ಸ್ ಟ್ಯಾಕ್ಸ್‌ನ್ನು ಇಳಿಸಬೇಕೆಂದು ನಾನು ಕೂಡ ಒತ್ತಾಯ ಮಾಡುತ್ತೇನೆ.

ಶ್ರೀ ಮಹದೇವ್ (ಕೆ.ಆರ್.ನಗರ) : ಕರ್ನಾಟಕ ಬಾರ್ಡರಿನಲ್ಲಿರತಕ್ಕ (ಹೊಸೂರು ಭಾಗದಲ್ಲಿ) ಹತ್ತು ಪೆಟ್ರೋಲ್ ಬಂಕ್‌ಗಳಲ್ಲಿರತಕ್ಕ ಸೇಲ್ಸ್ ನೋಡಿ. ಸಾವಿರಾರು ಟ್ರಕ್ಸ್‌ಗಳು ತಮಿಳುನಾಡಿಗೆ ಹೋಗುತ್ತವೆ. ಕರ್ನಾಟಕ ಬಾರ್ಡರ್ ಆದ ಮೇಲೆ, ಅಲ್ಲಿ ಆಗತಕ್ಕ ಸೇಲ್ಸ್ ನೋಡಿ. ಏಕೆಂದರೆ, ನಮಗೂ ದಿನನಿತ್ಯ ಮದ್ರಾಸ್ ಕಡೆ ಹೋಗಿ ಅನುಭವವಾಗಿದೆ. ಯಾವುದೇ ಭಾಗದಲ್ಲಿ ಹೋದರೂ ಕೂಡ, ಅಲ್ಲಿ 50 ಪೈಸೆ ಕಡಿಮೆಯಾದ ತಕ್ಷಣ, ಟೋಟಲ್ ಸೇಲ್ಸ್ ಟರ್ನ್ ಓವರ್ ಮೇಲೆ, ಸೇಲ್ಸ್ ಟ್ಯಾಕ್ಸ್ ಡಿಪೆಂಡ್ ಆಗಿರುವುದರಿಂದ ವಾಲ್ಯೂಮ್ ಆಫ್ ಸೇಲ್ಸ್‌ನಲ್ಲೂ ಕೂಡ ಡಿಪೆಂಡ್ ಆಗುತ್ತೆ. ಈ ವಾಲ್ಯೂಮ್ ಆಫ್ ಸೇಲ್ಸ್ ಎಲ್ಲಾ ಹೆಚ್ಚು ಕಡಿಮೆ ತಮಿಳುನಾಡಿನ ಕಡೆಗೆ ಹೋಗುತ್ತಿರುವುದರಿಂದ ಮಾನ್ಯ ಸಾರಿಗೆ ಸಚಿವರು ಒಂದು ಅಂಶವನ್ನು ಯೋಚನೆ ಮಾಡಬೇಕು. ಈಗ ನಮ್ಮ ಮಾನ್ಯ ಸ್ನೇಹಿತರು ವೆಲ್‌ನಲ್ಲಿ ಇದ್ದಾರೆ. ಕಾಲಿಂಗ್ ಅಟೆನ್‌ಷನ್ ಎಂದರೆ, calling for their attention - ಏನೋ ನನಗೆ ಗೊತ್ತಿಲ್ಲ. ಆದರೆ, it is for the attention of the Government. See, the Government should come with the firm assurance what they are going to do something regarding the sales tax. ಏಕೆಂದರೆ, ನಾನು ಸದಾ ಕಾಲಿಂಗ್ ಅಟೆನ್‌ಷನ್ ಹಾಕುವನು. ಬೇರೆ ರಾಜ್ಯಗಳವರೆಲ್ಲಾ ಮಾಡಿದ್ದಾರೆ, ಮಾಡಲಿ. ದಯವಿಟ್ಟು, ಸದನದಲ್ಲಿ ಒಂದು ಭರವಸೆ ಬರಲಿ.

ಶ್ರೀ ಎನ್.ಚೆಲುವರಾಯಸ್ವಾಮಿ : ತಾವು ವೆಲ್‌ನಿಂದ ಹೊರಗೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ಭರವಸೆ ಕೊಟ್ಟರೆ ನಾವು ವೆಲ್‌ನಿಂದ ಹೊರಗೆ ಬರುತ್ತೇವೆ.

ಶ್ರೀ ಎನ್.ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ ತಾವು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ದಯಮಾಡಿ ತಾವು ತಮ್ಮ ಸೀಟುಗಳಿಗೆ ಬಂದು ಆಸೀನರಾಗಬೇಕು ಎಂಬುದು ಸರ್ಕಾರದ ಪರವಾಗಿ ನನ್ನ ವಿನಂತಿ. ದಯಮಾಡಿ ತಾವು ನನ್ನ ಮಾತು ಮುಗಿಸುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ನಾನು ಹೇಗೆ ಕನ್‌ಕ್ಲೋಡ್ ಮಾಡಲಿ? ನಾನು ಏನು ಹೇಳುತ್ತೇನೆಂದು ದಯಮಾಡಿ ಕೇಳಿ ಸಾರ್. ನಂತರ ಕೊನೆಯ ಪಕ್ಷ ತಮಗೆ

ಸಮಾಧಾನವಾದರೆ, ದಯಮಾಡಿ ತಮ್ಮ ಸೀಟುಗಳಿಗೆ ಬರಬೇಕು ಎಂಬುದು ನನ್ನ ವಿನಂತಿ. ನಾನು ಹೆಚ್ಚು ದೀರ್ಘ ಸಮಯ ತೆಗೆದುಕೊಳ್ಳದೇ

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡುವುದರ ಬಗ್ಗೆ ತಾವು ಮಾತನಾಡಿ. ಅವರು ಆಮೇಲೆ ಬರುತ್ತಾರೆ. ಸ್ಟೇಟ್ ಟ್ಯಾಕ್ಸ್‌ನ್ನು ಎಷ್ಟು ಕಡಿಮೆ ಮಾಡುತ್ತೀರಿ? ಸೇಲ್ಸ್ ಟ್ಯಾಕ್ಸ್‌ನ್ನು ಬಹಳ ರಾಜ್ಯಗಳಲ್ಲಿ ಕಡಿಮೆ ಮಾಡಿದ್ದಾರೆ. ನೀವು ಏಕೆ ಕಡಿಮೆ ಮಾಡಬಾರದು? ಬೇರೆ ರಾಜ್ಯಗಳಿಗಿಂತ ಕಡಿಮೆ ಇದ್ದರೆ ಕೇಳಬಾರದು. ಬೇರೆ ರಾಜ್ಯಗಳಿಗಿಂತ ಜಾಸ್ತಿ ಇದ್ದಾಗ ಏಕೆ ಕಡಿಮೆ ಮಾಡಬಾರದು? ಜೊತೆಗೆ ಕಡಿಮೆ ಮಾಡಿಬಿಟ್ಟರೆ ನಮಗೆ ನಿರೀಕ್ಷಿತ ಆದಾಯ ಬರುವುದಿಲ್ಲ, ರೆವಿನ್ಯೂ ಬರುವುದಿಲ್ಲ ಎನ್ನುವಂತೆಯೂ ಇಲ್ಲ. ಅದಕ್ಕಿಂತ ಜಾಸ್ತಿ ಆದಾಯ ಬರುತ್ತದೆ. ವ್ಯಾಪಾರವೂ ಜಾಸ್ತಿಯಾಗುತ್ತದೆ. ಜೊತೆಗೆ ಸಾರ್ವಜನಿಕರಿಗೆ ತೊಂದರೆಯಾಗುವುದೂ ಕೂಡ ಕಡಿಮೆಯಾಗುತ್ತದೆ. ಬಡವರ ಹೊರೆ ಕೂಡ ಕಡಿಮೆಯಾಗುತ್ತದೆ. why cannot you take a decision? ತಾವು ಏಕೆ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಾರದು? ನೀವು ಟ್ಯಾಕ್ಸ್ ಬಗ್ಗೆ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಜಿ ಉಪ ಮುಖ್ಯಮಂತ್ರಿಗಳು ಸಮರ್ಥ ಹಣಕಾಸಿನ ಸಚಿವರಾಗಿ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳೂ ಕೂಡ ಬಹಳ ಸ್ಪಂದಿಸಿದ್ದಾರೆ. ಈ ವಿಚಾರದಲ್ಲಿ ತೆರಿಗೆಯನ್ನು ಕಡಿಮೆ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆಯೂ ಕೂಡ ಸರ್ಕಾರದ ಅನೇಕ ಪರ್ಯಾಯ ಸೂತ್ರಗಳಲ್ಲಿ ಅದೂ ಒಂದು ಆ ಸೂತ್ರದ ಬಗ್ಗೆಯೂ ಕೂಡ ಮಾನ್ಯ ಚೆಲುವರಾಯಸ್ವಾಮಿಯವರು ಮಾತನಾಡುವಾಗ ಸರ್ಕಾರ ಇದರ ಬಗ್ಗೆ ಖಂಡಿತವಾಗಿ ನಾವು ಪರ್ಯಾಯ ಯೋಚನೆ ಮಾಡುತ್ತೇವೆ. ಸಚಿವ ಸಂಪುಟದ ಸಭೆಯಲ್ಲಿ ತರಬೇಕು. ಸದನದಲ್ಲಿ ಗಮನ ಸೆಳೆಯುವ ನೋಟಿಸ್ ಬಂದಿದೆ. ತಾವು ಎಲ್ಲರೂ ಹಿರಿಯರಿದ್ದೀರಿ. ಗಮನವನ್ನು ತಾವು ಸೆಳೆದಿದ್ದೀರಿ. ಇದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ. ಇದರ ಆಚೆ ಸರ್ಕಾರವನ್ನು ಚರ್ಚೆಗೆ ಎಳೆಯತಕ್ಕಂಥಾದ್ದಕ್ಕೂ ಅವಕಾಶ ಇಲ್ಲ ಮಾನ್ಯ ರಮೇಶ್‌ಕುಮಾರ್‌ರವರು ನಗುತ್ತಿದ್ದಾರೆ. ಅವರಿಗೆ ಗೊತ್ತಿದ್ದರೂ ನಮ್ಮ ಸಹಾಯಕ್ಕೆ ಅವರು ಬರುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಸುಮ್ಮನೇ ಇಮ್ಮಬಿಡುತ್ತಾರೆ. ಇದು ಗಮನ ಸೆಳೆಯುವ

ಸೂಚನೆ. Now you have called the attention of the Govt. ಅದಕ್ಕೆ ಈಗ ಏನಾಯಿತು Government is seized of this matter.

Sri K.R. Ramesh Kumar: The attention of an attentive Government is always called for. If the Government deliberately not attentive, how can one try to call the attention?

Sri M.P. Prakash: Sir, We will look at you for the guidance. ಈಗ ರೂಲಿಂಗ್ ಕೊಟ್ಟಿದ್ದೀರಿ. ಗಮನ ಸೆಳೆಯುವ ಸೂಚನೆ ಅಂದರೆ ಸರ್ಕಾರದ ಗಮನಕ್ಕೆ ತರುವುದು. ಮಾನ್ಯ ಮಂತ್ರಿಗಳು ಸಂಬಂಧಪಟ್ಟವರು ಉತ್ತರಕೊಟ್ಟರು. ಅವರೇನೂ ನಿರಾಕರಿಸಿಲ್ಲ. ಸರ್ಕಾರದಲ್ಲಿ ಇದನ್ನು ಯೋಚನೆ ಮಾಡಿ ಮುಂದೆ ನಿರ್ಧಾರ ಮಾಡುತ್ತಾರೆ. 30 ಬಾರಿ ಅವರು ಹೆಚ್ಚು ಮಾಡಿದ್ದರೂ ಕೂಡ ನಾವು 8 ಬಾರಿ ಮಾತ್ರ ಹೆಚ್ಚು ಮಾಡಿದ್ದೇವೆ. 2 ಬಾರಿ ನಾವು ಕಡಿಮೆ ಮಾಡಿದಂತಹ ಉದಾಹರಣೆ ಕೂಡ ಇದೆ. ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವಾಗ ಇದು ಒಂದೇ ಅಲ್ಲ, ಲಾರಿ ಮೊದಲಾದವು ಇವೆ ಅಂತ ಹೇಳಿದರು. ಮಾನ್ಯ ಸಿದ್ದರಾಮಯ್ಯನವರು ಕೊಟ್ಟರತಕ್ಕಂಥ ಸಲಹೆ ವಾಲ್ಯೂಮ್ ಆಫ್ ಟ್ರೇಡ್ ಹೆಚ್ಚಾದರೆ ನಮಗೆ ಹೆಚ್ಚಿನ ಆದಾಯ ಕೂಡ ಬರುತ್ತದೆ. ಅದು ಡೈವರ್ಟ್ ಆಗಿ ಹೋದರೆ ನಮಗೆ ಹೆಚ್ಚು ಆದಾಯ ಬರುವುದಿಲ್ಲ ಅಂದರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು ಬಂದ ಕೂಡಲೇ ಮಾನ್ಯ ನಮ್ಮ ಸಾರಿಗೆ ಸಚಿವರು ಅವರ ಗಮನಕ್ಕೆ ತರುತ್ತಾರೆ. ನಾನೂ ಕೂಡ ಅವರ ಗಮನಕ್ಕೆ ತರುತ್ತೇನೆ, ದಯವಿಟ್ಟು ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಗಮನ ಸೆಳೆದಿದ್ದೀರಿ. ನಾವು ಸರ್ಕಾರದವರು ಅದನ್ನು ಗಂಭೀರವಾಗಿ ಪರಿಗಣಿಸುತ್ತಿದ್ದೇವೆ. ದಯವಿಟ್ಟು ತಮ್ಮ ಆಸನದಲ್ಲಿ ತಾವು ಕುಳಿತುಕೊಳ್ಳಬೇಕು. ನಾವು ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕಿಂತ ಹೆಚ್ಚಿಗೆ ಏನು ಮಾಡುತ್ತೀರಿ? you cannot. You have already drawn the attention of the Government.

ಉಪಾಧ್ಯಕ್ಷರು: ಉತ್ತರ ಆಗಲೇ ಹೇಳಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅವರು ಪ್ರತಿಪಕ್ಷದ ಸಾಲಿನಲ್ಲಿರತಕ್ಕಂಥ ಅತ್ಯಂತ ಅನುಭವಿ ನಾಯಕರುಗಳು ಸರ್ಕಾರ ನಾವು ಪರಿಶೀಲನೆ ಮಾಡುತ್ತೇವೆ, ಚರ್ಚೆ ಮಾಡುತ್ತೇವೆ ಅಂತ ಹೇಳುತ್ತಿದ್ದಾರೆ. ಅವರು ಇಲ್ಲದೇ ಹೋದರೆ ಈ ಸಾಲಿಗೆ ಕಳೆ ಬರುವುದಿಲ್ಲ. ನಮಗೆ ಬೇಜಾರು ಆಗುತ್ತಿದೆ. ನಾವು ಅಲ್ಲಿಗೆ ಬಂದರೆ

ಇವರು ಹಗಲೆಲ್ಲಾ ಅಲ್ಲೇ ಇರುತ್ತಾರೆ ಅಂತ ಹೇಳುತ್ತಾರೆ. ಅವರು ಇಲ್ಲದೇ ನಾವು ಇರುವುದಕ್ಕೆ ಇಲ್ಲಿ ಆಗುವುದಿಲ್ಲ. ದಯಮಾಡಿ ಅವರನ್ನು ಇಲ್ಲಿಗೆ ಕಳುಹಿಸಿಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದು ಏನಾಗುತ್ತದೆ ಅಂದರೆ ಮಾನ್ಯ ಉಪಾಧ್ಯಕ್ಷರೆ ನಾವು ಎರಡು ದಿವಸ ಅಲ್ಲಿ ಕುಳಿತು ಬಂದಿದ್ದೇವೆ. ಆಗ ಅವರಿಗೂ ಬಹಳ ಬೇಜಾರು ಆಗುತ್ತಿತ್ತು ನಾವು ಏಕೆ ಹೋಗಬಾರದು ಅಂತ. ಈಗ ಅಟ್‌ಲಿಸ್ಟ್ ಒಂದು 3 ಗಂಟೆಯಾದರೂ ಕೂರಬೇಕು ಅಂತ ಬಂದಿದ್ದಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾವು ಅನಾವಶ್ಯಕವಾಗಿ ಬಂದಿದ್ದರೆ ನೀವು ಆ ರೀತಿ ಹೇಳಬಹುದು. We are not dictating, we are only requesting the Govt.

Sri M.P. Prakash: Yes Sir, I will tell you. See we have considered that, very very symphathetically with all seriousness. ಈ ವಿಚಾರ ಸಚಿವ ಸಂಪುಟ ಸಭೆಯಲ್ಲಿ ಬರಬೇಕು. ಬೇಕಾದರೆ, ಮಾನ್ಯ ಸಿದ್ದರಾಮಯ್ಯನವರನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ; ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ. ನಾಳೆಯೇ ಮಾತನಾಡಬೇಕು. ಈ ಬಗ್ಗೆ ಒಂದು ಭರವಸೆ ಕೊಡುವುದಾದರೆ ಬರುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್: ಭರವಸೆ ಅಲ್ಲ ಆ ದಿಸೆಯಲ್ಲಿ Every.....

SRI R. ROSHAN BAIG: The House is not in order.

MR. DEPUTY SPEAKER: No problem, The House is in order.

ಶ್ರೀ ಎಂ.ಪಿ. ಪ್ರಕಾಶ್: ಅವರು ಬಾವಿಯಲ್ಲಿ ಇದ್ದಾಗಲೂ ಸಹ ಚರ್ಚೆಯಾದರೆ ಹೌಸ್ ಇನ್ ಆರ್ಡರ್ ಅಂತ ಬೇಕಾದಷ್ಟು ರೂಲಿಂಗ್‌ಗಳು ಇವೆ. ಆದ್ದರಿಂದ ಅದಕ್ಕೇನೂ ತೊಂದರೆ ಇಲ್ಲ. ಆದರೆ ಅವರು ಅಲ್ಲಿ ನಿಂತು ಚರ್ಚೆ ಮಾಡುವಂತಿಲ್ಲ. ಅವರು ತಮ್ಮ ಸೀಟಿಗೆ ಬಂದು ಚರ್ಚೆ ಮಾಡಿ ಮತ್ತೆ ಹೋಗಬಹುದು.

ಶ್ರೀ ವಾಟಾಳ್ ನಾಗರಾಜ್: ತಾವು ನಮ್ಮ ಮನವಿಯನ್ನು ಮುಖ್ಯಮಂತ್ರಿಗಳಿಗೆ ಹೇಳಿ ಒಂದು ಹೇಳಿಕೆಯನ್ನು ಕೊಡಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್: ಹೇಳಿಕೆ ಕೊಡಿಸುತ್ತೇನೆ.